ಓ.ಎಸ್.ನಂಬರ್. 113 ಃ2009 ಪಿಡಬ್ಲು-1

<u>ದಿಃ30-08-14 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಮತ್ತು ಪ್ರಮಾಣಿಸಲಾಯಿತು</u>

ಪಾಟೀಸವಾಲುಃ ಶ್ರೀ ಟಿಕೆಎಂ ವಕೀಲರಿಂದ ಃ

ನಾನು ಕೆಜಿಐಡಿ ಇಲಾಖೆಯಲ್ಲಿ ನಿವೃತ್ತಿ ಸೂಪರಿಡೆಂಟ್ ಆಗಿ ಕೆಲಸ ಮಾಡುತ್ತಿದ್ದೆ. ನಾನು ಕಳೆದ 30ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. 2ನೇವಾದಿ 1ವರ್ಷದಿಂದ ಬೆಂಗಳೂರಿನಲ್ಲಿ ವಾಸ ಇದ್ದಾರೆ. 3ನೇವಾದಿ ನನ್ನ ಸಂಬಂಧಿಕರು. ನಮ್ಮ ಊರಿನಲ್ಲಿರುವ ನಮ್ಮ ಮನೆ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ನನಗೆ ಪಿತ್ರಾರ್ಜಿತವಾಗಿ ಬಂದ ಮನೆಯ ಅಳತೆ ಎಷ್ಟುಎಂದರೆ ಸಾಕ್ಷಿ ನಾನು ಅಳತೆ ಮಾಡಿಲ್ಲ ಎಂದು ಹೇಳಿರುತ್ತಾರೆ. ಪುಟ್ಟಕಾವಲಪ್ಪ ,ನನ್ನುಸಾಬ್ ಮತ್ತು ಬಾಷಸಾಬರ ಮನೆ, ನಮ್ಮ ಮನೆಯ ಪೂ.ಕ್ಕೆ ಇರುತ್ತದೆ. ಪ.ಕ್ಕೆ-ರಸ್ತೆ ,ಸದರಿ ರಸ್ತೆಯು ಪ್ರತಿವಾದಿಯ ಪಶ್ಚಿಮಕ್ಕೆ ಬರುತ್ತದೆ. ನಮ್ಮ ಪಿತ್ರಾರ್ಜಿತ ಮನೆಯ ಉ.ಕ್ಕೆ ಮಿಲ್‌ನಾರಾಯಣಪ್ಪನವರ ಮನೆ ಬರುತ್ತದೆ ಎಂದರೆ ಸರಿ. ದ.ಕ್ಕೆ-2ಅಡಿ ಅಗಲದ ಗಲ್ಲಿ ಇರುತ್ತದೆ. ಸದರಿ ಗಲ್ಲಿ ಮುಂಚೆಯಿಂದಲೂ ತುಂಗಾನಹಳ್ಳಿ–ಚಿಕ್ಕಾನಹಳ್ಳಿಯಿಂದ ಬರುವ ಕಾಲುಹಾದಿ ಆಗಿರುತ್ತದೆ ಎಂದರೆ ಸರಿಯಲ್ಲ. ಕಾಲುಹಾದಿಯ ನಂತರ ಚಂದ್ರಪ್ಪ ಮತ್ತು ಕೃಷ್ಣಪ್ಪನವರ ಮನೆಗಳು ಬರುತ್ತದೆ ಎಂದರೆ ಸಾಕ್ಷಿಯು 2ಅಡಿ ಗಲ್ಲಿ ಎಂದು ಹೇಳಿರುತ್ತಾರೆ.

ಗಲ್ಲಿ ಯಾವ ರೀತಿ ಬಂದಿರುತ್ತದೆ ಎಂದರೆ ಸಾಕ್ಷಿಯು ಅದು ಮಾಮೂಲಿಯಾಗಿ ಮುಂಚೆಯಿಂದಲೂ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ಗಲ್ಲಿ ನಮ್ಮ ಮನೆಯ ಪಶ್ಚಿಮಕ್ಕೆ ಇರುವ ರಸ್ತೆಗೆ ಸೇರುತ್ತದೆ ಎಂದರೆ ಸರಿ.

ನಮ್ಮ ಊರಿನಲ್ಲಿ 2ಪಂಚಾಯತಿ ರಸ್ತೆಗಳು ಇವೆ. ಸದರಿ ರಸ್ತೆಗಳ ಬಗ್ಗೆ ಪಂಚಾಯತಿ ದಾಖಲೆಗಳು ಇರುತ್ತದೆ. ಈ ನಾನು ದಾವೆ ಮಾಡಿರುವ ಜಾಗವು ಬಂಡಿಜಾಡು ಆಗಿರುತ್ತದೆ ಅಂದರೆ ಪುರಾತನ ಕಾಲದಿಂದಲೂ ಇರುತ್ತದೆ ಮತ್ತು ಅದು ಪಂಚಾಯತಿಗೆ ಸೇರಿದ ದಾವೆ ಆಗಿರುತ್ತದೆ. ನಾನು ನಮ್ಮ ಪಿತ್ರಾರ್ಜಿತ ಮನೆಯ ಪಶ್ಚಿಮಕ್ಕೆ ಇರುವ ರಸ್ತೆ ಬಿಟ್ಟು ಬೇರೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಪಶ್ಚಿಮಕ್ಕೆ ಇರುವ ರಸ್ತೆಯನ್ನು ಇತ್ತೀಚೆಗೆ ಮಾಡಿರುವ ರಸ್ತೆ ಎಂದರೆ ಸರಿಯಲ್ಲ. ಹಿಂದಿನಿಂದಲೂ ಸದರಿ ರಸ್ತೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನ ಪಶ್ಚಿಮದಲ್ಲಿರುವ ರಸ್ತೆ ಮಾದ್ವಾರದಿಂದ ಹೊಳವನಹಳ್ಳಿಗೆ ಹೋಗುವ ರಸ್ತೆಯಾಗಿರುತ್ತದೆ. ನಮ್ಮ ಊರಿನಿಂದ 1ಕೀ.ಮೀ.ದೂರದಲ್ಲಿ ಚಿಕ್ಕವಳ್ಳಿಗೆ ಹೋಗುವ ರಸ್ತೆ ಇರುತ್ತದೆ. ನಮ್ಮ ಊರಿನಿಂದ 1ಕೀ.ಮೀ.ದೂರದಲ್ಲಿ ತುಂಗಾನಹಳ್ಳಿಗೆ ಹೋಗುವ ರಸ್ತೆ ಇದ್ದು ಅದು ನಮ್ಮ ಊರಿನ ಪಶ್ಚಿಮಕ್ಕೆ ಇರುವ ರಸ್ತೆಗೆ ಬಂದು ಸೇರುತ್ತದೆ. ನಾನು ನಮ್ಮ ಊರಿನ ನಕಾಶೆಯನ್ನು ನೋಡಿರುತ್ತೇನೆ.

ನನಗೆ ನಮ್ಮ ಊರಿನ ನಕ್ಷೆಯನ್ನು ನೋಡಿ ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ರಸ್ತೆಗಳು ಹಾದು ಹೋಗಿರುತ್ತದೆಂದು ಹೇಳಲು ಆಗುವುದಿಲ್ಲ. ನಮ್ಮ ಊರಿಗೆ ತುಂಗಾನಹಳ್ಳಿ, ಚಿಕ್ಕವಳ್ಳಿಯಿಂದ ಕಾಲು ಹಾದಿಯನ್ನು ಬಿಟ್ಟು ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಃ ಬಂಡಿಜಾಡು ಇರುತ್ತದೆಂದು ಹೇಳಿರುತ್ತಾರೆ. ನಮ್ಮ ಊರಿನ ಆಗ್ನೇಯ ಮೂಲೆಯಲ್ಲಿ ತುಂಗಾನಹಳ್ಳಿಯಿಂದ ಒಂದುಕಾಲುಹಾದಿ ಬರುತ್ತದೆಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆಯ ದ.ಕ್ಕೆ-ಇರುವ ದಾರಿ ತುಂಗಾನಹಳ್ಳಿಯಿಂದ ಬರುವ ಕಾಲುಹಾದಿಗೆ ಸೇರುತ್ತದೆಂದರೆ ಸರಿಯಲ್ಲ. ತುಂಗಾನಹಳ್ಳಿಯಿಂದ ಬರುವ ಕಾಲುಹಾದಿಯು ನಮ್ಮ ಊರಿನ ಪೂರ್ವ ಮತ್ತು ದಕ್ಷಿಣದ ಮೂಲೆಯಲ್ಲಿ ಒಂದು ದಾರಿ

ನನ್ನ ಮನೆಯ ದಕ್ಷಿಣಭಾಗದಲ್ಲಿ ಮತ್ತೊಂದು ದಾರಿ ನಮ್ಮ ಮನೆಯ ಪೂರ್ವದಲ್ಲಿ ಪುಟ್ಟಕಾವಲಪ್ಪನವರ ರೊಪ್ಪ ಮತ್ತು ನಿವೇಶನದ ಪೂರ್ವಭಾಗದಲ್ಲಿ ಅಂದರೆ ಊರಿನ ಪೂರ್ವಭಾಗದಲ್ಲಿ ಊರಿನ ಉತ್ತರದ ಕಡೆಗೆ ಹೋಗುತ್ತದೆ ಎಂದರೆ ಸರಿಯಲ್ಲ. ನಮ್ಮ ಊರಿನ ಗ್ರಾಮದ ಉತ್ತರದ ಕಡೆಗೆ ಒಂದು ಸೀಳುಹಾದಿ ಇರುತ್ತದೆಂದರೆ ಸರಿಯಲ್ಲ. ಪುಟ್ಟಕಾವಲಪ್ಪನವರ ಮನೆಯ ಪೂರ್ವಕ್ಕೆ ಕಾಲುದಾರಿ ಇರುತ್ತದೆಂದರೆ ಸಾಕ್ಷಿಯ ಬಂಡಿಜಾಡು ಇರುತ್ತದೆಂದು ಹೇಳಿರುತ್ತಾರೆ. ಸದರಿ ದಾರಿ ಪೂರ್ವದಿಂದ ಉತ್ತರದ ಕಡೆಗೆ ಹೋಗುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಃಪಶ್ಚಿಮ ದಿಕ್ಕಿಗೆ ಹೋಗುತ್ತದೆಂದು ಹೇಳಿರುತ್ತಾರೆ. ನಮ್ಮ ಊರಿನಲ್ಲಿರುವ ಓ.ಕೆ.ಕಾಲೋನಿ ನಮ್ಮ ಊರಿನ ಪೂರ್ವದಿಕ್ಕಿನಲ್ಲಿದೆ.

ಸದರಿ ಕಾಲೋನಿ ಇತ್ತೀಚೆಗೆ ಆಗಿರುತ್ತದೆ ಎಂದರೆ ಸಾಕ್ಷಿ ಸುಮಾರು ವರ್ಷಗಳಿಂದ ಆಗಿರುತ್ತದೆಂದು ಹೇಳಿರುತ್ತಾರೆ. ನಮ್ಮ ಊರು ಮತ್ತು ಎ.ಕೆ. ಕಾಲೋನಿ ತುಂಗಾಹಳ್ಳಿಯಿಂದ ಕಾಲುದಾರಿ ಹಾದು ಹೋಗುತ್ತದೆಂದರೆ ಸರಿಯಲ್ಲ. ಸದರಿ ಕಾಲುದಾರಿ ಮಾದ್ವಾರ ಮತ್ತು ಹೊಳವನಹಳ್ಳಿಯಿಂದ ನಮ್ಮ ಊರಿನ ಮುಂಭಾಗದಲ್ಲಿರುವ ರಸ್ತೆಗೆ ಸೇರುತ್ತದೆಂದರೆ ಸರಿಯಲ್ಲ. ನಮ್ಮ ಊರಿನ ಪೂರ್ವ ಮತ್ತು ದಕ್ಷಿಣಭಾಗದಲ್ಲಿ ಇರುವ ಕಾಲುದಾರಿಯನ್ನು ಬಿಟ್ಟು ಬೇರೆ ಯಾವುದೇ ಕಾಲುದಾರಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನ ಪೂರ್ವ ದಿಕ್ಕಿನಲ್ಲಿ ಉತ್ತರ-ದಕ್ಷಿಣವಾಗಿ ನೀರು ಹೋಗಲು ಒಂದು ಚರಂಡಿ ಇದೆ ಎಂದರೆ ಸರಿ. ಸದರಿ ಚರಂಡಿಯ ಮೇಲೆ ಬಂಡೆಯನ್ನು ಹಾಸಿರುತ್ತಾರೆಂದರೆ ಸಾಕ್ಷಿಯು ಕೆಲವು ಕಡೆ ಹಾಸಿರುತ್ತಾರೆ ಇನ್ನು ಕೆಲವು ಕಡೆ ಹಾಸಿರುವುದಿಲ್ಲ ಎಂದು ಹೇಳಿರುತ್ತಾರೆ. ನಮ್ಮ ಪಿತ್ರಾರ್ಜಿತ ಮನೆ ಬಿದ್ದು ಹೋಗಿ ಸು.10-15ವರ್ಷವಾಗಿದೆಂದರೆ ಸರಿಯಲ್ಲ. ನಾನು ನಮ್ಮ ಊರಿಗೆ ಹೋಗುವುದಿಲ್ಲ ಎಂದರೆ ಸರಿಯಲ್ಲ.

ನಾನು ದಾವೆ ಮಾಡಿರುವ ಜಾಗವು ಯಾವ ಯಾವ ಸರ್ವೆ ನಂಬರ್‌ನಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಗ್ರಾಮಠಾಣಾದಲ್ಲಿ ಬರುತ್ತದೆಂದು ಹೇಳಿರುತ್ತಾರೆ. ನಾನು ಸಾರ್ವಜನಿಕ ಹಿತಾಸಕ್ತಿಯಿಂದ ಬಂಡಿಜಾಡುಗಾಗಿ ಈ ದಾವೆಯನ್ನು ಮಾಡಿದ್ದೇನೆ. ನಾನು ದಾವೆ ಮಾಡಿದ

ಪೂ.ಕ್ಕೆ-ಎ.ಕೆ ಕಾಲೋನಿ, ಪ.ಕ್ಕೆ-ರಸ್ತೆ ,ಉ.ಕ್ಕೆ-ಪ್ರತಿವಾದಿ ನಿರ್ಮಾಣ ಮಾಡಿರುವ ಕಟ್ಟಡ, ದ.ಕ್ಕೆ-ಗಂಗಾಧರಯ್ಯ, ನಾರಾಯಣಪ್ಪ, ಕೃಷ್ಣಪ್ಪ, ಅಕ್ಕಮ್ಮ ,ಬಾಬುಜಾನ್ ,ಪುಟ್ಟಕಾವಲಪ್ಪ ಮತ್ತು ನನಗೆ ಸೇರಿದ ಖಾಲಿ ನಿವೇಶನ ಮತ್ತು ಮನೆ ಇರುತ್ತದೆ. ಪ್ರತಿವಾದಿ ಈಗ ಮನೆ ಕಟ್ಟಿರುವ ಜಾಗ ಅವರಿಗೆ ಹೇಗೆ ಬಂದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ಮನೆಯನ್ನು ಅವರ ಹೆಂಡತಿ ಕಟ್ಟಿಸಿದ್ದಾರೆ. ಪ್ರತಿವಾದಿ ಕಟ್ಟಿರುವ ಮನೆ ಅವರ ಹೆಂಡತಿ ಹೆಸರಿನಲ್ಲಿ ಇರುತ್ತದೆ, ಆದರೆ ಅವರ ಹೆಸರು ಗೊತ್ತಿರುವುದಿಲ್ಲ. ಪ್ರತಿವಾದಿ ಕಟ್ಟಿರುವ ಮನೆ ಪಿತ್ರಾರ್ಜಿತವಾಗಿ ಬಂದಿರುತ್ತದೆಂದರೆ ಸರಿ. ಪ್ರತಿವಾದಿ ಮನೆಯನ್ನು ಪೂರ್ವ-ಪಶ್ಚಿಮ 76ಅಡಿ ,ಉತ್ತರ-ದಕ್ಷಿಣ 42ಅಡಿ ಇರುತ್ತದೆಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಸ್ತೀರ್ಣದ ಪೂ.ಕ್ಕೆ-ಎ.ಕೆ.ಕಾಲೋನಿ ಇರುತ್ತದೆ, ಪ.ಕ್ಕೆ- ಕಾವಲಪ್ಪ ಮತ್ತು ಈಶ್ವರಪ್ಪನ ಮನೆ ಇದೆ. ಕಾವಲಪ್ಪ ಮತ್ತು ಪ್ರತಿವಾದಿಯ ಮನೆಯ ನಡುವೆ ರಸ್ತೆ ಮಾಡಿದ್ದಾರೆಂದರೆ ಸಾಕ್ಷಿಯು ಬಹಳ ಹಿಂದಿನಿಂದಲೂ ಮಾಡಿರುತ್ತಾರೆಂದು ಹೇಳಿರುತ್ತಾರೆ. ಉತ್ತರಕ್ಕೆ ಪ್ರತಿವಾದಿಯ ತಂದೆ ಅಶ್ವದ್ಧಪ್ಪನವರಿಂದ ಖರೀದಿ ಮಾಡಿದ ಸ್ಥಳವಾಗಿದೆಂದರೆ ಸರಿ. ದ.ಕ್ಕೆ- ವೀರಣ್ಣನವರ ಮನೆ ಇರುತ್ತದೆಂದರೆ ಸರಿ. ಪ್ರತಿವಾದಿಯ ತಂದೆ ಮತ್ತು ಅವರ ಚಿಕ್ಕಪ್ಪನವರು ಮಧುಗಿರಿ ನ್ಯಾ.ದಲ್ಲಿ ವಿಭಾಗಕ್ಕಾಗಿ ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ತಂದೆ ಮತ್ತು ಚಿಕ್ಕಪ್ಪ 76ಅಡಿಇಂಟು 42ಅಡಿ ವಿಸ್ತೀರ್ಣದಲ್ಲಿ ಎಷ್ಟು ಎಷ್ಟು ಜಾಗವನ್ನು ಭಾಗ ಮಾಡಿಕೊಂಡಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ 76ಇಂಟು42ಜಾಗದಲ್ಲಿ ಪೂರ್ವಾದ 36ಇಂಟು40ಅಡಿ ವಿಸ್ತೀರ್ಣ ಪ್ರತಿವಾದಿ ಚಿಕ್ಕಪ್ಪನ ಭಾಗಕ್ಕೆ ಹೋಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ, ಆದರೆ ಪೂರ್ವಭಾಗದಲ್ಲಿ ಹೋಗಿರುತ್ತದೆಂದು ಹೇಳಿರುತ್ತಾರೆ. ಪಶ್ಚಿಮಅರ್ಧ ಭಾಗ ಪ್ರತಿವಾದಿ ತಂದೆಗೆ ಹೋಗಿದೆ ಎಂದರೆ ಸರಿ. ಪ್ರತಿವಾದಿಯ ಚಿಕ್ಕಪ್ಪ ತನ್ನ ಭಾಗಕ್ಕೆ ಬಂದ ಆಸ್ತಿಯನ್ನು ಲಕ್ಷ್ಮಿನರಸಯ್ಯನವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ಲಕ್ಷ್ಮಿನರಸಯ್ಯನವರು ತಾನು ಖರೀದಿ ಮಾಡಿದ ನಿವೇಶನದ ಅರ್ಧಭಾಗವನ್ನು ಮಂಜುನಾಥ್‌ರವರಿಗೆ ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ

ಎಷ್ಟು ಜಾಗ ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲವೆಂದು ಹೇಳಿರುತ್ತಾರೆ. ದಕ್ಷಿಣಅರ್ಧ ಜಾಗವನ್ನು ಮಂಜುನಾಥ್‌ರವರು ಖರೀದಿ ಮಾಡಿದ್ದಾರೆಂದರೆ ಸರಿ. ಮಂಜುನಾಥ್‌ರವರು ಮನೆಯನ್ನು ಕಟ್ಟಿ ಪೂವಶಕ್ಕೆ ಬಾಗಿಲನ್ನು ಇಟ್ಟಿದ್ದಾರೆಂದರೆ ಸರಿ. ಮಂಜುನಾಥ್‌ರವರ ಮನೆ ಮುಂದೆ ಎ.ಕೆ.ಕಾಲೋನಿ ಇದೆ ಎಂದರೆ ಸರಿ. ಎ.ಕೆ.ಕಾಲೋನಿ ಮತ್ತು ಮಂಜುನಾಥ್‌ರವರ ಮನೆಯ ಮಧ್ಯದಲ್ಲಿ ಚರಂಡಿ ಇದೆ ಎಂದರೆ ಸರಿ. ಮಂಜುನಾಥ್‌ರವರ ಮನೆಯ ಮುಂದೆ ಇರುವ ಚರಂಡಿ ಮತ್ತು ಎ.ಕೆ.ಕಾಲೋನಿಯ ಮಧ್ಯೆ ಕಾಲುಹಾದಿ ಹಾದುಹೋಗಿರುತ್ತದೆಂದರೆ ಸರಿಯಲ್ಲ. ಮುಸ್ಲಿಂ ಮನೆಯ ಪೂರ್ವದ ವರೆವಿಗೂ ಚರಂಡಿ ಹಾದುಹೋಗಿದೆ ಎಂದರೆ ಸರಿ. ಸಿಂಗೋನಹಳ್ಳಿಯಿಂದ ಬರುವ ಕಾಲುಹಾದಿ ಸದರಿ ಚರಂಡಿಗೆ ಹೊಂದಿಕೊಂಡಂತೆ ಇದೆ ಎಂದರೆ ಸರಿಯಲ್ಲ.

ಪ್ರತಿವಾದಿಯ ಹೆಂಡತಿ ಕಟ್ಟಿರುವ ಮನೆ ಪ್ರತಿವಾದಿ ಅಣ್ಣತಮ್ಮಂದಿರು ಭಾಗ ಮಾಡಿಕೊಂಡ ಸಮಯದಲ್ಲಿ ಪ್ರತಿವಾದಿಗೆ ಹೋಗಿರುತ್ತದೆಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ಮನೆ ಮತ್ತು ವೀರಣ್ಣನ ಮನೆ ಮಧ್ಯದಲ್ಲಿ 3ಅಡಿ ಅಗಲದ ಗಲ್ಲಿಯನ್ನು ಪ್ರತಿವಾದಿಯ ಚಿಕ್ಕಪ್ಪನವರ ನಿವೇಶನಕ್ಕೆ ಹೋಗಲು ಬಿಟ್ಟುಕೊಂಡಿರುತ್ತಾರೆಂದರೆ ಸಾಕ್ಷಿಯು ಅದು ಬಂಡಿಜಾಡು ಆಗಿರುತ್ತದೆಂದು ಹೇಳಿರುತ್ತಾರೆ. ನಾನು ಹೇಳಿದ ಹಾಗೆ ಕಾಲುಹಾದಿ ಮತ್ತು ನಕಾಶೆಯಲ್ಲಿ ಕಂಡ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ವೀರಣ್ಣನ ಮನೆ ಪೂ-ಪಶ್ಚಿಮ 42ಅಡಿ, ಉ-ದಕ್ಷಿಣ 13ಅಡಿ ಇರುತ್ತದೆಂದರೆ ನನಗೆ ಗೊತ್ತಿರುವುದಿಲ್ಲ. ಮುಂಚೆ ವೀರಣ್ಣನ ಮನೆಯ ಬಾಗಿಲು ಪಶ್ಚಿಮಕ್ಕೆ ಇತ್ತು ಎಂದರೆ ಸರಿ. ಪ್ರತಿವಾದಿಯ ಅನುಮತಿ ಪಡೆದುಕೊಂಡು ನರಸಿಂಹಯ್ಯನ ಮಕ್ಕಳು ಉತ್ತರದದಿಕ್ಕಿನಲ್ಲಿ ಬಾಗಿಲನ್ನು ಇಟ್ಟುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ನರಸಿಂಹಯ್ಯನ ಮನೆ ಬಾಗಿಲು ಉತ್ತರಕ್ಕೆ ಇರುತ್ತದೆಂದು ಹೇಳಿರುತ್ತಾರೆ. ಪ್ರತಿವಾದಿಗೆ ಸೇರಿದ ಹಿಂದಿನ ಖಾನೇಷು ಮಾಡಿ ಸಂಖ್ಯೆಃ871 ಆಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಇತ್ತೀಚೆಗೆ ಎಲ್ಲಾ ನಿವೇಶನಗಳಿಗೆ ಹೊಸ ನಂಬರ್‌ಗಳನ್ನು ನೀಡಿದ್ದಾರೆಂದರೆ ಸಾಕ್ಷಿ ಇರಬಹುದು ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ,

ಸಿ ಜೆ ಕೊರಟಗೆರೆ